ದಿನಾಂಕಃ 02.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

13. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಕೆಲವು ದಾಖಲೆಗಳನ್ನು ತನಿಖಾ ಕಾಲದಲ್ಲಿ ತನಿಖಾಧಿಕಾರಿಯವರಿಗೆ ನೀಡಿದ್ದು ಅವುಗಳನುನ ಪೊಲೀಸಲು ಸ್ವೀಕರಿಸಿರುವುದಿಲ್ಲ ಈ ಕಾರಣಕ್ಕಾಗಿ ನಾನು ವಿಚಾರಣೆಗೆ ಬಂದಾಗ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಚಾಸಾ.2 ರವರ ಗಾಯಗಳಿಗೆ ಸಂಬಂಧಿಸಿದ ಮೂರು ಪೋಟೊಗಳನ್ನು ನಿಪಿ.2 ರಿಂದ 4 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ನಾನು ನನ್ನ ಮೊಬೈಲಿನಲ್ಲಿ ಸೆರೆಹಿಡಿದಿದ್ದು, ನಂತರ ಸ್ಟುಡಿಯೋಗೆ ಹೋಗಿ ಡಾಟಾ ಕೇಬಲ್ ಮೂಲಕ ನನ್ನ ಮೊಬೈಲಿನಿಂದ ಪೊಟೋಗಳನ್ನು ಸಿಡಿಗೆ ಬರ್ನ ಮಾಡಲಾಗಿರುತ್ತದೆ. ಸಿಡಿಯನ್ನು ನೋಡುತ್ತಿದ್ದು ನಿಪಿ.5 ಎಂದು ಗುರುತಿಸಲಾಯಿತು. ರತ್ನ ಲ್ಯಾಬ್ ರವರು ನೀಡಿದ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಚಾಸಾ.2 ರವರಿಗೆ ಸಂಬಂಧಿಸಿದ ಒಂದು ಎಕ್ಸರೇಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.6 ಎಂದು, ಏಳು ರೆಡಿಯಾಲಜಿ ವರದಿಗಳನ್ನು ಕ್ರಮವಾಗಿ ನಿಪಿ.7 ರಿಂದ 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾಧ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ